









ಈ ಮಡಕೆಯ ಬಾಯಿ ಕೊಂಚ ಅಗಲವಾಗಿದ್ದರೂ, ತಳದಲ್ಲಿನ ನೀರು ಕುಡಿಯಲು ಕಾಗೆ ಸರ್ಕಸ್ ಮಾಡಬೇಕಿತ್ತು. ಆ ಕಸರತ್ತಿನ ಸಹವಾಸ ಬೇಡವೆಂದು ಕಾಗೆ ಯೋಚಿಸಿರಬೇಕು; ಕೊಕ್ಕಿನಲ್ಲಿ ಒಂದೊಂದೇ ಕಲ್ಲನ್ನು ಕಚ್ಚಿತಂದು ಮಡಕೆಗೆ ಹಾಕಿತು. ಮತ್ತದೇ ಕಥೆ. ದಾಹ ತಣಿಸಿಕೊಂಡ ಕಾಗೆ ತೃಪ್ತಿಯಿಂದ ಹಾರಿಹೋಯಿತು.

ಜಾಣ ಕಾಗೆ ನೀರು ಕುಡಿದ ದೃಶ್ಯವನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುವಾಗ, ಹಳೆಯ ಕಥೆ ನೆನಪಿಗೆ ಬಂತು. ಈ ಫೋಟೊಗಳನ್ನು ನೋಡಿದರೆ, ನಿಮಗೂ ಕಥೆ ನೆನಪಾದೀತು. ಅಂದಹಾಗೆ, ಈ ಕಾಗೆಗೂ ತಲೆಮಾರುಗಳ ಹಿಂದಿನ ಜಾಣ ಕಾಗೆಗೂ ಏನಾದರೂ ನಂಟಿರಬಹುದಾ? ‘ನನಗೂ ನಿನಗೂ ಅಂಟಿದ ನಂಟಿನ ಕೊನೆ ಬಲ್ಲವರಾರು ಕಾಮಾಕ್ಷಿಯೇ’ ಎನ್ನುವ ಬೇಂದ್ರೆಯಜ್ಜನ ಹಾಡು ಈ ಕಾಗೆಗಳಿಗೂ ಅನ್ವಯವಾಗುವಂತಿದೆ. ಒಂದಂತೂ ನಿಜ, ಈ ‘ಕಾಕವಿಲಾಸ’ವನ್ನು ನೋಡುತ್ತಾ ಯೋಚಿಸುತ್ತಾ ಓದುತ್ತಾ ನಮ್ಮ ಮೋರೆಗಳ ಬಿಗು ಸಡಿಲಿಸಿ, ತುಟಿಗಳಲ್ಲಿ ಮಂದಹಾಸ ಮಿನುಗುವುದಂತೂ ಖರೆ.

ಪ್ರತಿಕ್ರಿಯಿಸಿ: **feedback@sudha.co.in**